# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103


ಸಂಖ್ಯೆ: ತುವಿ:ಶೈ.ವಿ:2019-20: 2486 ದಿನಾಂಕ:18.09.2019

## : ಸುತ್ತೋಲೆ :

ವಿಷಯ : 2019-20ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿ ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಕುರಿತು.

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:18.09.2019

* * * * *

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, 2019-20ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮೂಲ ದಾಖಲೆಗಳನ್ನು ಒಟ್ಟಾಗಿ (One-Shot) ವಿಶ್ವವಿದ್ಯಾನಿಲಯವು ದೂರವಾಣಿ ಮೂಲಕ ತಿಳಿಸುವ ನಿಗದಿತ ದಿನಾಂಕದಂದು ಒಂದೇ ಬಾರಿಗೆ ಪ್ರವೇಶಾನುಮೋದನೆ ಪಡೆದುಕೊಳ್ಳುವಂತೆ ಈ ಹಿಂದೆ **19.07.2019ರ ಸುತ್ತೋಲೆಯಲ್ಲಿ** ತಿಳಿಸಿದ್ದರೂ ಹಾಗೂ ವಿದ್ಯಾರ್ಥಿಯ ಪ್ರವೇಶವು ಖಚಿತಗೊಂಡ ನಂತರ ವಿದ್ಯಾರ್ಥಿಗಳಿಂದ ಮೂಲ ದಾಖಲೆಗಳನ್ನು ಪಡೆದುಕೊಳ್ಳಲು ಸಾಕಾಷ್ಟು ಸಮಯವಕಾಶವಿದ್ದರೂ ವರ್ಗಾವಣೆ ಪತ್ರ/ಅಂಕಪಟ್ಟಿ/ವಲಸೆ ಪ್ರಮಾಣ ಪತ್ರ ಇಲ್ಲವೆಂದು ಸಬೂಬು ಹೇಳಿಕೆಗಳನ್ನು ಎಲ್ಲಾ ಕಾಲೇಜಿನವರು ನೀಡಿರುತ್ತಾರೆ, ವಿದ್ಯಾರ್ಥಿಯ ಸೂಕ್ತ ದಾಖಲೆಗಳು ಇಲ್ಲದೆ ಪ್ರವೇಶ ಮಾಡಿಕೊಳ್ಳುತ್ತಿದ್ದು, ಇದು ವಿಶ್ವವಿದ್ಯಾನಿಲಯದ ಅಧಿನಿಯಮ ಹಾಗೂ ವಿನಿಯಮಗಳಿಗೆ ವಿರುದ್ಧವಾಗಿರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಪ್ರಕರಣ (61) ರಲ್ಲಿ **"ವಿಶ್ವವಿದ್ಯಾನಿಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗೆ ಅರ್ಹನಾಗಿರತಕ್ಕದಲ್ಲ"** ಎಂದು ಉಲ್ಲೇಖಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು, ಮೂಲ ದಾಖಲೆಗಳನ್ನು ಸಲ್ಲಿಸದೇ ಇರುವಂತಹ ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತಂದು, ಮೂಲ ದಾಖಲೆಗಳನ್ನು ಪಡೆದು, **ದಿನಾಂಕ 30.09.2019ರೊಳಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ, ಪ್ರವೇಶಾನುಮೋದನೆ ಪಡೆಯುವಂತೆ ಸೂಚಿಸಿದೆ. ಪ್ರವೇಶಾನುಮೋದನೆಯಾಗದ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಹಾಜರುಪಡಿಸಿದಲ್ಲಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ಅಂತಹ ವಿದ್ಯಾರ್ಥಿಗಳ ಪ್ರವೇಶಾತಿಯು ತಂತಾನೇ ರದ್ದುಗೊಂಡಿದೆಯೆಂದು ಭಾವಿಸಿ ವಿದ್ಯಾರ್ಥಿಗಳಿಗೆ ಪ್ರವೇಶಾನುಮೋದನೆಯನ್ನು ನೀಡುವುದಿಲ್ಲವೆಂದು ತಿಳಿಸಿದೆ.**

**ಪ್ರಸ್ತಾಪಿತ ದಿನಾಂಕದ ನಂತರ ಯಾವುದೇ ವಿದ್ಯಾರ್ಥಿಗಳ ಪ್ರವೇಶಾನುಮೋದನೆಯನ್ನು ಮಾಡುವುದಿಲ್ಲವೆಂದು ಮತ್ತೊಮ್ಮೆ ತಿಳಿಸುತ್ತಾ ಪ್ರವೇಶಾನುಮೋದನೆ ಕುರಿತು ತಮ್ಮ ಮುಂದಿನ ಯಾವುದೇ ಅಹವಾಲು/ಕೋರಿಕೆ ಪತ್ರವನ್ನು ಪರಿಗಣಿಸುವುದಿಲ್ಲವೆಂದು ಈ ಮೂಲಕ ತಿಳಿಸಿದೆ.**

18/09

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಪ್ರಾಂಶುಪಾಲರು, ಘಟಕ/ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು :

1. ಮಾನ್ಯ ಕುಲಸಚಿವರು(ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಕಚೇರಿ ಪ್ರತಿ.